ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020-21 ದಿನಾಂಕ : 07-08-2020

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ

ಎಸ್. ಸುರೇಶ್‌ಕುಮಾರ್,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ದಿನಾಂಕ : 10-08-2020 ಸೋಮವಾರ ಅಪರಾಹ್ನ 03-00 ಗಂಟೆಗೆ
ಸ್ಥಳ : ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -3

# ಪತ್ರಿಕಾ ಪ್ರಕಟಣೆ

## ಕ್ರೀಡಾಂಗಣ ಬಳಕೆ ನೀತಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಆಕ್ಷೇಪಣೆಗಳಿಗೆ ಆಹ್ವಾನ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ) :

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಕ್ರೀಡಾಂಗಣಗಳ ಬಳಕೆ ನೀತಿಯ ಕರಡನ್ನು ಸಿದ್ಧಪಡಿಸಲಾಗಿದ್ದು, ಕರಡನ್ನು ಸಾರ್ವಜನಿಕರಿಂದ ಸಲಹೆ, ಸೂಚನೆ, ಆಕ್ಷೇಪಣೆಗಳನ್ನು ಪಡೆಯಲು ವೆಬ್ ಸೈಟ್ http://karunadu.karnataka.gov.in/dyes ನಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕರು ಕ್ರೀಡಾಂಗಣಗಳ ಬಳಕೆ ನೀತಿಗೆ ಸಂಬಂಧಿಸಿದಂತೆ ಆಗಸ್ಟ್ 20ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಇ-ಮೇಲ್ dyesdept@gmail.com ಗೆ ಸಲ್ಲಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಚಿವರ ಪ್ರವಾಸ

**ಬೆಂಗಳೂರು, 07 ಆಗಸ್ಟ್(ಕರ್ನಾಟಕ ವಾರ್ತೆ)**

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯನವರು 8ನೇ ಆಗಸ್ಟ್ 2020 ರವರೆಗೆ ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, 07 ಆಗಸ್ಟ್(ಕರ್ನಾಟಕ ವಾರ್ತೆ)**

ಕಂದಾಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಆರ್. ಅಶೋಕ 8ನೇ ಆಗಸ್ಟ್ 2020 ರವರೆಗೆ ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## EK BHARAT SHREST BHARAT (EBSB) – SAPTAH TO BE HELD AS A WEBINAR BY NCC GP HQ, MYSURU WEF 10 AUG TO 15 AUG 2020

**Bengaluru, August 7 (Karnataka Information)**

Traditionally 3 Karnataka Girls Bn NCC. under the aegis of NCC Group Mysuru used to conduct the Ek Bharat Shrest Bharat (EBSB) Camp every year in Mysuru. However this year due to the COVID-19 pandemic, the event is being organised as a webinar called 'EK Bharat Shrest Bharat saptah'. This is a maiden effort at the national level for the NCC Group Mysuru, though this year's Kargil Vijay Diwas, was also organized as a webinar at the local level. A total of 100 NCC cdts belonging to Punjab, Haryana, Himachal Pradesh and Chandigarh will take part in the event as guests while an equal number from Karnataka & Goa NCC Directorate will attend the event.

Due to the requirement of uninterrupted and robust internet connection a central class room has been organised at JSS Polytechnic for Women, JSS Technical Campus, thanks to the cooperation of JSS Mahavidyapeeta, Mysure

The aim of the webinar will be to foster a spirit of national integration and solidarity by breaking cultural, religious, geographical, environmental and linguistic barriers and learn about each other's cultural heritage.

The webinar would be held from 10 AM to 1 PM every day from 10 to 15 Aug 2020. To make the webinar interesting a few competitions like Debate, and quiz are also being added. One day has been earmarked for Life Skills Training by EXPA, an association of Ex NCC cadets. On the last day, which also happens to be the Independence Day a motivational lecture is scheduled by Dr Balasubramaniam of VLEAD, Mysuru.

The highlight of the webinar will be presentations or classes being conducted by Cadets themselves. All participants will be issued with e certificates. The cash prizes for the competitions will be sent directly into the bank account of the winners as DBT (Direct Benefit Transfer)

## ಮಳೆ ಹೆಚ್ಚು : ಮುಂಜಾಗ್ರತಾ ಕ್ರಮ ಕೈಗೊಳ್ಳು ಸೂಚನೆ

**ಬೆಂಗಳೂರು, 07 ಆಗಸ್ಟ್(ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯದಾದ್ಯಂತ ಮಳೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವು ಭಾಗ ಅತಿವೃಷ್ಠಿ ಮತ್ತು ಪ್ರವಾಹಕ್ಕೀಡಾಗುವ ಸಂದರ್ಭ ಹೆಚ್ಚಾಗುತ್ತಿದೆ. ಇಂತಹ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ರಾಜ್ಯದ ಎಲ್ಲಾ ಅಣೆಕಟ್ಟುಗಳ ಮತ್ತು ಜಲಾನಯನ ವ್ಯಾಪ್ತಿಯ ಮುಖ್ಯ ಇಂಜಿನಿಯರ್‌ಗಳಿಗೆ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಅವರು ಸೂಚನೆ ನೀಡಿದ್ದಾರೆ.

ದಿನನಿತ್ಯದ ಮಳೆಯ ಪ್ರಮಾಣ ಮತ್ತು ಜಲಾಶಯಗಳ ಮಾಹಿತಿ ಪಡೆದುಕೊಳ್ಳುತ್ತಿರುವ ಸಚಿವರು, ನೀರಾವರಿ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರದೇಶದಲ್ಲೇ ಇದ್ದು ಪರಿಸ್ಥಿತಿಯನ್ನು ಅವಲೋಕಿಸಿ ಪ್ರತಿ ದಿನ ವರದಿ ನೀಡಲು ಸಚಿವರು ಸೂಚನೆ ನೀಡಿದ್ದಾರೆ ಎಂದು ಅಧಿಕೃತ ಕಚೇರಿ ಪ್ರಕಟಣೆ ತಿಳಿಸಿದೆ.

## ಎಸ್.ಎಸ್.ಎಲ್.ಸಿ. ಫಲಿತಾಂಶ : ಆಗಸ್ಟ್ 10 ರಂದು

**ಬೆಂಗಳೂರು, 07 ಆಗಸ್ಟ್ (ಕರ್ನಾಟಕ ವಾರ್ತೆ)**

ಜೂನ್ / ಜುಲೈ 2020 ರ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಆಗಸ್ಟ್ 10 ರಂದು ಅಪರಾಹ್ನ 3–00 ಗಂಟೆಗೆ ಪ್ರಕಟವಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.